# ಯುಪಿಐ (UPI)ಗೆ 10 ವರ್ಷ

## ಇತ್ತೀಚೆಗೆ ಸುದ್ದಿಯಲ್ಲಿದೆ:

ಏಪ್ರಿಲ್ 2016ರಲ್ಲಿ ಪ್ರಾರಂಭವಾದ 'ಏಕೀಕೃತ ಪಾವತಿ ವ್ಯವಸ್ಥೆ' (UPI), ಹತ್ತು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಜಾಗತಿಕ ಮಟ್ಟದಲ್ಲಿ ಗಮನಾರ್ಹ ಮೈಲಿಗಲ್ಲು ಸ್ಥಾಪಿಸಿದೆ.

## ಏಕೀಕೃತ ಪಾವತಿ ವ್ಯವಸ್ಥೆ (UPI - UNIFIED PAYMENTS INTERFACE):

### ಪ್ರಾರಂಭಿಸಿದವರು:

2016 ರಲ್ಲಿ 'ಭಾರತೀಯ ರಾಷ್ಟ್ರೀಯ ಪಾವತಿ ನಿಗಮ'ವು (NPCI) ಯುಪಿಐ ಅನ್ನು ವಿನ್ಯಾಸಗೊಳಿಸಿ, ಬಿಡುಗಡೆ ಮಾಡಿತು.

### ಉದ್ದೇಶ:

- ಒಂದೇ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಅನೇಕ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವ ವ್ಯವಸ್ಥೆಯಾಗಿದೆ.
- ತಡೆರಹಿತ ಹಣ ರವಾನೆ
- ಹಲವಾರು ಬ್ಯಾಂಕಿಂಗ್ ಸೌಲಭ್ಯಗಳು
- ವ್ಯಾಪಾರಿ ಪಾವತಿಗಳನ್ನು ಒಂದೇ ವೇದಿಕೆಯಡಿ ಒಗ್ಗೂಡಿಸುತ್ತದೆ.

### ಅಂತರರಾಷ್ಟ್ರೀಯ ವಿಸ್ತರಣೆ



ಕಾರ್ಯನಿರ್ವಹಣೆಯಲ್ಲಿರುವ ಅಥವಾ ಯೋಜಿತ ಪರಸ್ಪರ ಕಾರ್ಯಸಾಧ್ಯತೆ ಹೊಂದಿರುವ ದೇಶಗಳು ಯಾವವೆಂದರೆ, ಸಿಂಗಾಪುರ (PayNow), ಯು ಎ ಇ, ಫ್ರಾನ್ಸ್, ನೇಪಾಳ, ಭೂತಾನ್, ಮಾರಿಷಸ್, ಶ್ರೀಲಂಕಾ, ಇಂಡೋನೇಷ್ಯಾ ರಾಷ್ಟ್ರಗಳು UPI ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ.

## ಭಾರತೀಯ ರಾಷ್ಟ್ರೀಯ ಪಾವತಿ ನಿಗಮ (NPCI)

- ಇದು ಭಾರತದಲ್ಲಿ ಚಿಲ್ಲರೆ ಪಾವತಿಗಳ ಕಾರ್ಯನಿರ್ವಹಣೆಗಾಗಿ ಇರುವ ಒಂದು 'ಪ್ರಮುಖ ಸಂಸ್ಥೆ' (Umbrella body)ಯಾಗಿದೆ.

### ಸ್ಥಾಪಿಸಿದವರು:

ಭಾರತೀಯ ರಿಸರ್ವ್ ಬ್ಯಾಂಕ್ (RBI)

ಭಾರತೀಯ ಬ್ಯಾಂಕುಗಳ ಸಂಘ (IBA)

ಜಂಟಿಯಾಗಿ ಇದನ್ನು ಸ್ಥಾಪಿಸಿವೆ.

### ಯಾವುದರ ಅಡಿಯಲ್ಲಿ ಸ್ಥಾಪಿಸಲಾಗಿದೆ?

ಇದನ್ನು 'ಪಾವತಿ ಮತ್ತು ನಿವಾರಣಾ ವ್ಯವಸ್ಥೆಗಳ ಕಾಯ್ದೆ', 2007 ರ (Payment and Settlement Systems Act) ಅಡಿಯಲ್ಲಿ ಸ್ಥಾಪಿಸಲಾಗಿದೆ.

## NPCI ನ ಪ್ರಮುಖ ಉತ್ಪನ್ನಗಳು

- ರುಪೇ (RuPay)
- ರಾಷ್ಟ್ರೀಯ ಸಾಮಾನ್ಯ/ಏಕರೂಪ ಸಂಚಾರ ಕಾರ್ಡ್ (National Common Mobility Card)
- ಭಾರತ್ ಇಂಟರ್ಫೇಸ್ ಫಾರ್ ಮನಿ (BHIM)
- ಏಕೀಕೃತ ಪಾವತಿ ವ್ಯವಸ್ಥೆ (UPI)
- ಭಾರತ್ ಬಿಲ್ ಪಾವತಿ ವ್ಯವಸ್ಥೆ (Bharat Bill Payment System)